# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 738 |
| 2 | ಸದಸ್ಯರ ಹೆಸರು | : | ಶ್ರೀ ಯು. ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 13-07-2023 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಬಸವನಗುಡಿ ವಿಧಾನ ಸಭೆ ಕ್ಷೇತ್ರದ ಎನ್.ಆರ್. ಕಾಲೋನಿಯ ಬಿ.ಬಿ.ಎಂ.ಪಿ ಕಟ್ಟಡದಲ್ಲಿರುವ ಬ್ಯಾಡ್ಮಿಂಟನ್ ಕ್ರೀಡಾಂಗಣದ ನಿರ್ವಹಣೆಯನ್ನು ಯಾವ ಸಂಸ್ಥೆ ವ್ಯಕ್ತಿಗೆ ವಹಿಸಲಾಗಿದೆ; | ಬೆಂಗಳೂರು ನಗರದ ಬಸವನಗುಡಿ ವಿಧಾನ ಸಭಾ ಕ್ಷೇತ್ರದ ಎನ್.ಆರ್. ಕಾಲೋನಿಯ ಬಿ.ಬಿ.ಎಂ.ಪಿ ಕಟ್ಟಡದಲ್ಲಿರುವ ಬ್ಯಾಡ್ಮಿಂಟನ್ ಒಳಾಂಗಣ ಕ್ರೀಡಾಂಗಣದ ನಿರ್ವಹಣೆಯನ್ನು ಎನ್.ಆರ್. ಕಾಲೋನಿ ಸ್ಪೋರ್ಟ್ಸ್ ಕ್ಲಬ್ ಸಂಸ್ಥೆಗೆ ವಹಿಸಲಾಗಿರುತ್ತದೆ. |
| ಆ) | ಸದರಿ ಬ್ಯಾಡ್ಮಿಂಟನ್ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ಸರ್ಕಾರ / ಬಿಬಿಎಂಪಿ ವ್ಯಯಿಸಿರುವ ಅನುದಾನ ಎಷ್ಟು; ಖರ್ಚಾಗಿರುವ ಅನುದಾನ ಎಷ್ಟು; | ಈ ಬ್ಯಾಡ್ಮಿಂಟನ್ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ಪಾಲಿಕೆ ವತಿಯಿಂದ ವ್ಯಯಿಸಿರುವ ಅನುದಾನ ಮತ್ತು ಖರ್ಚಾಗಿರುವ ಅನುದಾನದ ವಿವರ ಈ ಕೆಳಕಂಡಂತೆ ಇರುತ್ತದೆ. |

| ಕ್ರಮ ಸಂಖ್ಯೆ | ವಾರ್ಷಿಕ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಕಾರ್ಯಾದೇಶ ಮೊತ್ತ (ರೂ.ಲಕ್ಷಗಳಲ್ಲಿ) | ಖರ್ಚಾಗಿರುವ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | 2017-18 | 99.00 | 98.25 | 98.19 |
| 2 | 2018-19 | 85.00 | 79.91 | 79.40 |
| ಒಟ್ಟು | | **184.00** | **178.16** | **177.59** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಈ ಕ್ರೀಡಾಂಗಣಗಳ ಸಂಬಂಧ ಸರ್ಕಾರ / ಬಿಬಿಎಂಪಿಗೆ ಸಂದಾಯವಾಗುತ್ತಿರುವ ಮಾಸಿಕ / ವಾರ್ಷಿಕ ಮೊತ್ತವೆಷ್ಟು; | ಎನ್.ಆರ್. ಕಾಲೋನಿ ಸ್ಪೋರ್ಟ್ಸ್ ಕ್ಲಬ್ ಈ ಪ್ರದೇಶದ ಉದಯೋನ್ಮುಖ ಕ್ರೀಡಾಪಟುಗಳಿಗೆ ಉಚಿತವಾಗಿ ಬ್ಯಾಡ್ಮಿಂಟನ್ ತರಬೇತಿ ನೀಡಲು ಸಮ್ಮತಿಸಿರುವ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್‌ನ ವಿಷಯ ಸಂಖ್ಯೆ: 441/2017-18, ದಿನಾಂಕ: 23-03-2018ರ ಸಭೆಯ ತೀರ್ಮಾನದಂತೆ, ಬೆಂಗಳೂರು ನಗರದ ಬಸವನಗುಡಿ ವಿಧಾನಸಭಾ ಕ್ಷೇತ್ರದ ಎನ್.ಆರ್. ಕಾಲೋನಿಯ ಬಿಬಿಎಂಪಿ ಕಟ್ಟಡದಲ್ಲಿರುವ ಬ್ಯಾಡ್ಮಿಂಟನ್ ಒಳಾಂಗಣ ಕ್ರೀಡಾಂಗಣಕ್ಕೆ ವಿದ್ಯುತ್ ಶುಲ್ಕ ಮತ್ತು ಒಳ ಚರಂಡಿ ಶುಲ್ಕವನ್ನು ಮಾತ್ರ ಪಾವತಿಸಲು ಸದರಿ ಸ್ಪೋರ್ಟ್ಸ್ ಕ್ಲಬ್ ರವರಿಗೆ ಸೂಚಿಸಲಾಗಿದೆ. |

| | | |
|---|---|---|
| ಈ) | ಈ ಬ್ಯಾಡ್ಮಿಂಟನ್ ಒಳಾಂಗಣ ಕ್ರೀಡಾಂಗಣವನ್ನು ಇ-ಟೆಂಡರ್ ಮೂಲಕ ನೀಡಲಾಗಿದೆಯೇ; ಹಾಗಿದ್ದಲ್ಲಿ, ಟೆಂಡರ್ ನೋಟಿಫಿಕೇಷನ್ ಹಾಗೂ ಅದರ ನಿಬಂಧನೆಗಳು ಮತ್ತು ನಿಗಧಿಪಡಿಸಿರುವ ಕಾಲಮಿತಿಯೇನು? (ವಿವರ ಒದಗಿಸುವುದು) | ಈ ಬ್ಯಾಡ್ಮಿಂಟನ್ ಒಳಾಂಗಣ ಕ್ರೀಡಾಂಗಣದ ನಿರ್ವಹಣೆಯನ್ನು ಇ-ಟೆಂಡರ್ ಮೂಲಕ ನೀಡಿರುವುದಿಲ್ಲ.<br><br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್‌ನ ವಿಷಯ ಸಂಖ್ಯೆ: 441/2017-18, ದಿನಾಂಕ: 23-03-2018ರ ಸಭೆಯ ತೀರ್ಮಾನದಂತೆ, ಬೆಂಗಳೂರು ನಗರದ ಬಸವನಗುಡಿ ವಿಧಾನಸಭಾ ಕ್ಷೇತ್ರದ ಎನ್.ಆರ್. ಕಾಲೋನಿಯ ಬಿಬಿಎಂಪಿ ಕಟ್ಟಡದಲ್ಲಿರುವ ಬ್ಯಾಡ್ಮಿಂಟನ್ ಒಳಾಂಗಣ ಕ್ರೀಡಾಂಗಣವನ್ನು ಎನ್.ಆರ್. ಕಾಲೋನಿ ಸ್ಪೋರ್ಟ್ಸ್ ಕ್ಲಬ್ ರವರಿಗೆ ದಿನಾಂಕ: 12-12-2018 ರಿಂದ 5 ವರ್ಷಗಳ ಗುತ್ತಿಗೆ ಅವಧಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಗುತ್ತಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ.<br><br>1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ. 154ರ ಬಸವನಗುಡಿ ಎನ್.ಆರ್. ಕಾಲೋನಿ ರಸ್ತೆಯಲ್ಲಿರುವ 4088 ಚದರಡಿ ನಿವೇಶನದಲ್ಲಿ ಎನ್.ಆರ್. ಕಾಲೋನಿ ಸ್ಪೋರ್ಟ್ಸ್ ಕ್ಲಬ್‌ಗೆ ಪಾಲಿಕೆ ವತಿಯಿಂದ ನಿರ್ಮಿಸಿರುವ ಕಟ್ಟಡದ 3ನೇ ಅಂತಸ್ತು 4088 ಚದರಡಿ ಪೂರಾ ಜಾಗವು ಈ ಗುತ್ತಿಗೆ ಕರಾರಿಗೆ ಒಳಪಟ್ಟಿರುತ್ತದೆ.<br>2) ಗುತ್ತಿಗೆದಾರರು ಸದರಿ ಕಟ್ಟಡವನ್ನು ಎನ್.ಆರ್. ಕಾಲೋನಿ ಸ್ಪೋರ್ಟ್ಸ್ ಕ್ಲಬ್‌ಗೆ ಬ್ಯಾಡ್ಮಿಂಟನ್ ತರಬೇತಿ ನೀಡುವ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದೇ ಹೊರತು, ಬೇರೆ ಉದ್ದೇಶಗಳಿಗೆ ಕಟ್ಟಡವನ್ನು ಉಪಯೋಗಿಸಬಾರದು.<br>3) ಗುತ್ತಿಗೆ ಅವಧಿಯನ್ನು ಕೆಎಂಸಿ ಕಾಯ್ದೆ 1976ರ ನಿಯಮ 176(II) 2ರ ಮೇರೆಗೆ ಪಾಲಿಕೆ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಮಹಾನಗರ ಪಾಲಿಕೆ ಸಭೆಗೆ 5 ವರ್ಷಗಳ ಗುತ್ತಿಗೆ ಅವಧಿಗೆ ಹಂಚಿಕೆ ಮಾಡಲು ಅಧಿಕಾರವಿರುತ್ತದೆ.<br>4) ಎನ್.ಆರ್. ಕಾಲೋನಿ ಸ್ಪೋರ್ಟ್ಸ್ ಕ್ಲಬ್ ರವರು ಉದಯೋನ್ಮುಖ ಕ್ರೀಡಾಪಟುಗಳಿಗೆ ಉಚಿತವಾಗಿ ಬ್ಯಾಡ್ಮಿಂಟನ್ ತರಬೇತಿ ನೀಡಲು ಪಾಲಿಕೆ ಸಭೆಯಲ್ಲಿ ತೀರ್ಮಾನಿಸಿರುತ್ತಾರೆ.<br>5) ಗುತ್ತಿಗೆ ನೀಡಿರುವ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯತೆಯನ್ನು ಕಾಪಾಡುವುದು. |

. . .3/-

| | | |
|---|---|---|
| | | 6) ಸದರಿ ಷೆಡ್ಯೂಲ್ ಸ್ವತ್ತನ್ನು ಬೇರೆಯವರಿಗೆ ಪರಭಾರೆ ಅಥವಾ ಮರು ಗುತ್ತಿಗೆ ನೀಡಲು ಅವಕಾಶವಿರುವುದಿಲ್ಲ.<br>7) ವಿದ್ಯುಚ್ಛಕ್ತಿ ಹಾಗೂ ನೀರಿನ ಬಿಲ್‌ಗಳನ್ನು ಕಾಲಕಾಲಕ್ಕೆ ಸಂಬಂಧಪಟ್ಟ ಇಲಾಖೆಗಳಿಗೆ ಗುತ್ತಿಗೆದಾರರೇ ಪಾವತಿ ಮಾಡುವುದು.<br>8) ಕಟ್ಟಡವನ್ನು ಯಾವುದೇ ರೀತಿ ಡ್ಯಾಮೇಜ್ ಮಾಡುವಂತಿಲ್ಲ. ಒಂದು ವೇಳೆ ಡ್ಯಾಮೇಜ್ ಆದಲ್ಲಿ ಅದರ ವೆಚ್ಚವನ್ನು ಗುತ್ತಿಗೆದಾರರೇ ಭರಿಸತಕ್ಕದ್ದು.<br>9) ಕಟ್ಟಡದಲ್ಲಿ ಎಲ್ಲಾ ಸುರಕ್ಷತೆಯ ಕ್ರಮಗಳನ್ನು ಕೈಗೊಳ್ಳುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಯಾವುದೇ ಅನಾಹುತಗಳು ಸಂಭವಿಸಿದಲ್ಲಿ, ಅದಕ್ಕೆ ಪಾಲಿಕೆಯು ಜವಾಬ್ದಾರಿಯಾಗುವುದಿಲ್ಲ.<br>10) ಗುತ್ತಿಗೆ ಅವಧಿಯು ಮುಗಿದ ನಂತರ ಸದರಿ ಕಟ್ಟಡವನ್ನು ಪಾಲಿಕೆಗೆ ಹಿಂದಿರುಗಿಸುವುದು.<br>11) ಗುತ್ತಿಗೆ ಅವಧಿಯು ಮುಗಿದ ನಂತರ, ಪುನಃ ನವೀಕರಿಸದೇ ಇದ್ದ ಪಕ್ಷದಲ್ಲಿ ಕಟ್ಟಡವನ್ನು ಪಾಲಿಕೆಗೆ ಹಿಂದಿರುಗಿಸತಕ್ಕದ್ದು.<br>12) ಮೇಲ್ಕಂಡ ಯಾವುದೇ ಗುತ್ತಿಗೆ ಷರತ್ತುಗಳನ್ನು ಗುತ್ತಿಗೆದಾರರು ಉಲ್ಲಂಘಿಸಿದಲ್ಲಿ ಪಾಲಿಕೆಯು ಯಾವುದೇ ಮುನ್ಸೂಚನೆ ನೀಡದೇ ಹಾಗೂ ಪರಿಹಾರವನ್ನು ನೀಡದೇ ದಂಡವನ್ನು ವಿಧಿಸಿ, ಸದರಿ ಕಟ್ಟಡವನ್ನು ಪಾಲಿಕೆಗೆ ವಾಪಸ್ಸು ಪಡೆಯುವ ಹಕ್ಕನ್ನು ಪಾಲಿಕೆಯು ಕಾಯ್ದಿರಿಸಿಕೊಂಡಿರುತ್ತದೆ. |

**ಸಂಖ್ಯೆ: ನಅಇ 288 ಎಂಎನ್‌ವೈ 2023 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ